<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ರಾಜ್ಯ ಯುವನೀತಿ ರಚನೆಗೆ ಸಂಬಂಧಿಸಿದಂತೆ ಚಾಲನಾ ಸಮಿತಿ ಮತ್ತು ಕರಡು ರಚನಾ ಸಮಿತಿಗಳನ್ನು ರಚಿಸುವ ಬಗ್ಗೆ.

ಓದಲಾಗಿದೆ: ದಿನಾಂಕ: 17-05-2012ರ ಡಿವೈಎಸ್‌ಎಸ್/ಯುನೀ/03/2011-12ನೇ ಸಂಖ್ಯೆಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರ ಪತ್ರ.

******

<u>ಪ್ರಸ್ತಾವನೆ:</u>

2012-13ನೇ ಸಾಲಿನ ಆಯವ್ಯಯ ಮಂಡನೆಯ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಶ್ರೀ ಗೋಪಾಲಕೃಷ್ಣ ಅಡಿಗರ ಕವಿವಾಣಿಯನ್ನು ಉಲ್ಲೇಖಿಸಿ ಹೊಸನಾಡು ಕಟ್ಟುವ ನಿರಂತರ ಪ್ರಕ್ರಿಯೆಯಲ್ಲಿ ಯುವಜನರ ಅದಮ್ಯ ಉತ್ಸಾಹ ಮತ್ತು ಶಕ್ತಿಯನ್ನು ರಚನಾತ್ಮಕವಾಗಿ ಬಳಸಿಕೊಳ್ಳಲು **ಯುವ ನೀತಿಯನ್ನು** ಅನುಷ್ಠಾನಗೊಳಿಸುವ ಸರ್ಕಾರದ ನಿಲುವನ್ನು ಪ್ರಕಟಿಸಿರುತ್ತಾರೆ. ರಾಜ್ಯದ ಯುವ ಮಾನವ ಸಂಪನ್ಮೂಲಗಳನ್ನು ತೊಡಗಿಸಿಕೊಂಡು ಅವರಲ್ಲಿರುವ ಕೌಶಲ್ಯವನ್ನು ಹೆಚ್ಚಿಸಿ ತನ್ಮೂಲಕ ಕರ್ನಾಟಕದ ಸಮಗ್ರ ಸಮೃದ್ಧಿಗೆ ಚಾಲನೆ ನೀಡುವ ಅಗತ್ಯತೆಯನ್ನು ಸರ್ಕಾರ ಮನಗಂಡಿದೆ. ಯುವ ಶಕ್ತಿಯನ್ನು ಒಂದು **ಜನಾಂಗಸ್ಥಿತಿ ಪ್ರಯೋಜನ** (Demographic Dividend) ವನ್ನಾಗಿ ಮಾಡಲು ಮತ್ತು ಯುವಜನರನ್ನು ವ್ಯವಸ್ಥಿತವಾಗಿ ಸಬಲೀಕರಣಗೊಳಿಸುವ ಹಿನ್ನೆಲೆಯಲ್ಲಿ, ಒಂದು ಯುವಜನ ಕಾರ್ಯನೀತಿಯನ್ನು ರೂಪಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಿತ ಯುವ ನೀತಿಯು ಅಂತರ ವಲಯ ಮಾರ್ಗದೊಂದಿಗೆ ಪ್ರಮುಖ ಸಂಸ್ಥೆ / ಇಲಾಖೆಗಳನ್ನು ಒಟ್ಟುಗೂಡಿ ಕೆಲಸ ಮಾಡಲು ಒಟ್ಟಾರೆ ಸಂಪನ್ಮೂಲ (ಅಂದಾಜು ರೂ. 4534.00 ಕೋಟಿ) ಹಂಚಿಕೊಳ್ಳಲು, ಪುನರಾವರ್ತನೆ ತಪ್ಪಿಸಲು, ಸಾಮರ್ಥ್ಯ ಹೆಚ್ಚಿಸಲು ಮತ್ತು ಯುವಜನರು ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಸಂಬಂಧಪಟ್ಟ ಎಲ್ಲಾ ವಲಯಗಳಿಗೆ ಪ್ರೇರಣೆ ನೀಡಿ ಉತ್ತೇಜಿಸಬೇಕಾಗಿದೆ. ಆದ್ದರಿಂದ ಉದ್ದೇಶಿತ ಯುವಜನ ಕಾರ್ಯನೀತಿಯನ್ನು ಅನುಷ್ಠಾನಗೊಳಿಸಲು ರೂ. 25.00 ಕೋಟಿ ಅನುದಾನ ಒದಗಿಸುವುದಾಗಿ ಮಾನ್ಯ ಮುಖ್ಯಮಂತ್ರಿಯವರು 2012-13ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುತ್ತಾರೆ. ಮುಂದುವರೆದು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಹೊಸ ಯೋಜನೆ ರಾಜ್ಯ ಯುವನೀತಿಯನ್ನು ರಚಿಸಲು ಆಯವ್ಯಯದಲ್ಲಿ ರೂ. 15.00 ಕೋಟಿಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು ಉಲ್ಲೇಖಿತ ಪತ್ರದ ಮೂಲಕ ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಈ ರಾಜ್ಯ ಯುವನೀತಿ ಜಾರಿಗೊಳಿಸುವ ಸಲುವಾಗಿ ಅಧಿಕಾರಿಗಳು ಮತ್ತು ಅಧಿಕಾರೇತರರನ್ನೊಳಗೊಂಡ ಚಾಲನಾ ಸಮಿತಿ ಮತ್ತು ಕರಡು ರಚನಾ ಸಮಿತಿಗಳೆಂಬ ಎರಡು ಸಮಿತಿಗಳನ್ನು ರಚಿಸಲು ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಯನ್ನು ಕೋರಿದ್ದು, ಮಾನ್ಯ ಮುಖ್ಯಮಂತ್ರಿಯವರು ಈ ಪ್ರಸ್ತಾವನೆಗೆ ಅನುಮೋದನೆಯನ್ನು ನೀಡಿರುತ್ತಾರೆ.

ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರ ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 108 ಯುಸೇಕ್ರೀ 2012 (ಭಾ-1),</u>

<u>ಬೆಂಗಳೂರು, ದಿನಾಂಕ: 02-06-2012</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ರಾಜ್ಯ ಯುವನೀತಿ ರಚನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿಗಳು ಮತ್ತು ಅಧಿಕಾರೇತರರನ್ನೊಳಗೊಂಡ ಚಾಲನಾ ಸಮಿತಿ ಮತ್ತು ಕರಡು ರಚನಾ ಸಮಿತಿಯನ್ನು ಈ ಮೂಲಕ ರಚಿಸಿ ಆದೇಶಿಸಿದೆ.

..2

Ref. No: 1020
Date: 4/6/12
File: 1.85
Signature:

## I. ಚಾಲನಾ ಸಮಿತಿ

1. ಶ್ರೀ ಗಿರೀಶ್ ಪಟೇಲ್, ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು. – ಅಧ್ಯಕ್ಷರು
2. ಪ್ರೊ: ಎಂ.ಕೆ.ಶ್ರೀಧರ, ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಜ್ಞಾನ ಆಯೋಗ. – ಸದಸ್ಯರು
3. ಶ್ರೀ ಸಂದೀಪ ಶಾಸ್ತ್ರಿ, ಕುಲಪತಿಗಳು, ಜೈನ ಮಹಾ ವಿದ್ಯಾಲಯ, ಬೆಂಗಳೂರು. – ಸದಸ್ಯರು
4. ಶ್ರೀ ಮೈಕೇಲ್ ವೇದ ಸಿರೋಮಣಿ, ಐಎಎಸ್, ಕುಲಪತಿಗಳು, ಆರ್.ಜಿ.ಎನ್.ಐ.ವೈ.ಡಿ., ಶ್ರೀ ಪೆರಂಬದೂರು, ತಮಿಳುನಾಡು. – ಸದಸ್ಯರು
5. ಶ್ರೀ ಮಹೇಶಪ್ಪ, ಕುಲಪತಿಗಳು, ವಿಟಿಯು, ಬೆಳಗಾವಿ – ಸದಸ್ಯರು
6. ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ – ಸದಸ್ಯರು
7. ಡಾ: ಬಾಲಸುಬ್ರಹ್ಮಣಿಯಮ್, ಎಸ್.ವಿ.ವೈ.ಎಮ್., ಮೈಸೂರು. – ಸದಸ್ಯರು
8. ಶ್ರೀಮತಿ ಅಶ್ವಿನಿ ನಾಚಪ್ಪ, ಅಂತರರಾಷ್ಟ್ರೀಯ ಕ್ರೀಡಾಪಟು, ಬೆಂಗಳೂರು. – ಸದಸ್ಯರು
9. ಶ್ರೀ ಎಂ.ಕೆ.ಬಲದೇವಕೃಷ್ಣ, ಐಎಎಸ್, ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು. – ಸದಸ್ಯ ಕಾರ್ಯದರ್ಶಿ

## II. ಕರಡು ರಚನಾ ಸಮಿತಿ

1. ಶ್ರೀ ಸಂದೀಪ ಶಾಸ್ತ್ರಿ, ಕುಲಪತಿಗಳು, ಜೈನ ಮಹಾ ವಿದ್ಯಾಲಯ, ಬೆಂಗಳೂರು. – ಅಧ್ಯಕ್ಷರು
2. ಶ್ರೀ ರಮೇಶಪ್ಪ, ವಿಶೇಷಾಧಿಕಾರಿಗಳು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು. – ಸದಸ್ಯರು
3. ಡಾ: ಅಶೋಕ್‌ಕುಮಾರ್, ರಿಜಿಸ್ಟ್ರಾರ್, ರಾಜೀವ್‌ಗಾಂಧಿ-ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್, ಬೆಂಗಳೂರು. – ಸದಸ್ಯರು
4. ಡಾ: ಜೆನ್ನಿ ರೋಸಾರಿಯೋ, ಪ್ರಾಧ್ಯಾಪಕರು, ಸೇಕ್ರೆಡ್ ಹಾರ್ಟ್ ಕಾಲೇಜು, ತಿರುಪತ್ತೂರು, ತಮಿಳುನಾಡು. – ಸದಸ್ಯರು
5. ಪ್ರೊ: ರಘು ಅಕ್ಕಮಂಚಿ, ಹುಬ್ಬಳ್ಳಿ – ಸದಸ್ಯರು
6. ಶ್ರೀಮತಿ ಬಿ.ಎಸ್.ಪದ್ಮಾವತಿ, ಹಿರಿಯ ಅನುಸಂಧಾನ ಸಹಯೋಗಿ, ಕರ್ನಾಟಕ ಜ್ಞಾನ ಆಯೋಗ. – ಸದಸ್ಯರು
7. ಶ್ರೀ ಅರ್ಜುನ ದೇವಯ್ಯ, ಅಂತರರಾಷ್ಟ್ರೀಯ ಕ್ರೀಡಾಪಟು, ಬೆಂಗಳೂರು. – ಸದಸ್ಯರು
8. ಶ್ರೀ ವೈ.ಆರ್.ಕಾಂತರಾಜೇಂದ್ರ, ಜಂಟಿ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು. – ಸದಸ್ಯ ಕಾರ್ಯದರ್ಶಿ

<u>ಸಹ ಸದಸ್ಯರುಗಳು</u>

9. ಶ್ರೀ ಸತೀಶ್ ಎ.ಸಜ್ಜನರ್, ಸಹಾಯಕ ನಿರ್ದೇಶಕರು (ತರಬೇತಿ),
ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.

10. ಶ್ರೀಮತಿ ಹೆಚ್.ಪಿ.ಮಂಜುಳಾ, ಸಹಾಯಕ ನಿರ್ದೇಶಕರು,
ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಮಂಡ್ಯ

11. ಶ್ರೀಮತಿ ಸೌಮ್ಯ ಚಂದ್ರಶೇಖರ್, ಯುವ ನೀತಿ ಸಮಾಲೋಚಕರು,
ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ.

12. ಶ್ರೀಮತಿ ಶುಭಾ ಭಟ್, ಯುವ ನೀತಿ ಸಮಾಲೋಚಕರು,
ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ.

13. ಡಾ: ಜಿತೇಂದ್ರ ಶೆಟ್ಟಿ, ಸಹಾಯಕ ನಿರ್ದೇಶಕರು (ಯೋಜನೆ),
ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.

ಮೇಲ್ಕಂಡ ಚಾಲನಾ ಸಮಿತಿ ಮತ್ತು ಕರಡು ರಚನಾ ಸಮಿತಿಗಳು ಕಾಲನುಕಾಲಕ್ಕೆ ಸಭೆ ಸೇರಿ, ಯುವ ನೀತಿಯ ಕರಡನ್ನು ಮೂರು ತಿಂಗಳ ಅವಧಿಯೊಳಗೆ ಸರ್ಕಾರಕ್ಕೆ ಸಲ್ಲಿಸಲು ಆದೇಶಿಸಿದೆ.

ಮೇಲಿನ ಸಮಿತಿಗಳ ಅಧಿಕಾರೇತರ ಅಧ್ಯಕ್ಷರು ಮತ್ತು ಸದಸ್ಯರುಗಳು ನಿಯಮಗಳನ್ವಯ ಸಭೆಗೆ ಹಾಜರಾಗಲು ಭತ್ಯೆಗಳನ್ನು ಪಡೆಯಬಹುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ. ಶ್ರೀನಿವಾಸ್)
ಸರ್ಕಾರದ ಅಧೀನ ಕಾರ್ಯದರ್ಶಿ
ಯುವಜನ ಸೇವಾ ಇಲಾಖೆ

ಗೆ,

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
3) ಸಂಬಂಧಿಸಿದ ಚಾಲನಾ ಸಮಿತಿ ಮತ್ತು ಕರಡು ರಚನಾ ಸಮಿತಿಯ ಅಧ್ಯಕ್ಷರು / ಸದಸ್ಯರುಗಳಿಗೆ (ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಮುಖಾಂತರ).
4) ಜಂಟಿ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
5) ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7) ಆಂತರಿಕ ಆರ್ಥಿಕ ಸಲಹೆಗಾರರು, ಯುವಜನ ಸೇವಾ ಇಲಾಖೆ, ಬ.ಮು.ಕಟ್ಟಡ, ಬೆಂಗಳೂರು.
8) ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.ವಿಧಾನಸೌಧ.
9) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯುವಜನ ಸೇವಾ ಇಲಾಖೆ ಇವರ ಪತ್ರಾಂಕಿತ ಆಪ್ತ ಸಹಾಯಕ
10) ಸರ್ಕಾರದ ಉಪ ಕಾರ್ಯದರ್ಶಿಗಳು, ಯುವಜನ ಸೇವಾ ಇಲಾಖೆ ಇವರ ಆಪ್ತ ಸಹಾಯಕ
11) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು.